ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಕುಡಿಯುವ ನೀರಿನ ಪೂರೈಕೆ

1091 (1540)

ಶ್ರೀ ಜಗದೀಶ್ ಶೆಟ್ಟರ್. (ಹುಬ್ಬಳ್ಳಿ-ಗ್ರಾಮೀಣ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಕಳೆದ 5ವರ್ಷಗಳಲ್ಲಿ ಅಭಿವೃದ್ಧಿಯಾದ ಅಧಿಕೃತ ವಸತಿ ಬಡಾವಣೆಗಳ ಸಂಖ್ಯೆ ಎಷ್ಟು

ಆ) ಅವುಗಳಲ್ಲಿ ಕುಡಿಯುವ ನೀರಿನ ಪೂರೈಕೆ ಮಾಡಲಾದ ಬಡಾವಣೆಗಳ ಸಂಖ್ಯೆ ಎಷ್ಟು

ಇ) ಇನ್ನೂ ಕುಡಿಯುವ ನೀರಿನ ಪೂರೈಕೆ ಮಾಡಬೇಕಾದ ಬಡಾವಣೆಗಳ ಸಂಖ್ಯೆ ಎಷ್ಟು

ಈ) ಅವುಗಳಿಗೆ ಎಂದಿನಿಂದ ಕುಡಿಯುವ ನೀರಿನ ಪೂರೈಕೆ ಮಾಡಲಾಗುವುದು (ಬಡಾವಣೆಗಳ ಹೆಸರು ಸಹಿತ ಮಾಹಿತಿ ಒದಗಿಸುವುದು)

ಶ್ರೀ ಮಿರಾಜುದ್ದೀನ್ ಪಟೇಲ್ (ಪೌರಾಡಳಿತ ರಾಜ್ಯ ಸಚಿವರ) :

ಅ) 62 ಬಡಾವಣೆಗಳು

ಆ) 41 ಬಡಾವಣೆಗಳು

ಇ) 21 ಬಡಾವಣೆಗಳು

ಈ) ಸದರಿ ಬಡಾವಣೆಗಳಲ್ಲಿ ಪ್ರತಿಶತ : 60ರಷ್ಟು ಕಟ್ಟಡಗಳು ಬಂದ ನಂತರ ಮಹಾನಗರ ಪಾಲಿಕೆಯಿಂದ ನೀರು ಸರಬರಾಜು ಮಾಡಲಾಗುವುದು. (ಬಡಾವಣೆಗಳ ಹೆಸರು ಸಹಿತ ಮಾಹಿತಿ ಲಗತ್ತಿಸಿದೆ.)

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1540ಕ್ಕೆ

ಮಹಾನಗರ ಪಾಲಿಕೆಯಿಂದ ನೀರು ಸರಬರಾಜು ಮಾಡದೇ ಇರುವ ವಸತಿ ವಿನ್ಯಾಸಗಳ ಪಟ್ಟಿ

1) ರಿಸ ನಂ. 94: ಎಸ್‌ಪಿ ಬಸವೇಶ್ವರ ಕೋ-ಆ ಸೊಸೈಟಿ ವಸತಿ ವಿನ್ಯಾಸ (ಶ್ರೀಪಾದನಗರ)

2) ರಿಸ ನಂ.101:3 ಎಸ್‌ಪಿ ನವಕಲ್ಯಾಣಮಠ ಟ್ರಸ್ಟ್ ವಿನ್ಯಾಸ

3) ರಿಸ ನಂ. 21: ಎ:ಡಿಡಿ ಡಾ. ಎಸ್.ಎ. ಎಳೇದಹಳ್ಳಿ ವಸತಿ ವಿನ್ಯಾಸ (ಸರೋವರ ನಗರ)

4) ರಿಸ ನಂ. 11:2 ಡಿಡಿ ಮಂಜುನಾಥ ಗೃಹ ನಿರ್ಮಾಣ ಸಂಘ (ಸಂಪಿಗೇನಗರ)

5) ಸಿಟಿಎಸ್ ನಂ. 50:ಬ:ಡಿಡಿ ಮರೇವಾಡ ಹೌ.ಸೊಸೈಟಿ ವಸತಿ ವಿನ್ಯಾಸ (ಮಹಾಂತನಗರ)

6) ರಿಸ ನಂ. 93:2 ವ110:2ಎಸ್‌ಪಿ ಶ್ರೀ ಪಿ.ಸಿ. ಕುರಕುರಿ ವಸತಿ ವಿನ್ಯಾಸ.

7) ರಿಸ ನಂ. 51:ಬ:ಡಿಡಿ ಶ್ರೀ ಪಿ.ಎಂ. ಕಮಲಾಪುರ ವಸತಿ ವಿನ್ಯಾಸ (ಶಿರಡಿ ಸಾಯಿಬಾಬಾನಗರ)

8) ರಿಸ ನಂ. 52:ಬ:ಅ1: 1ಬ ವ52 :ಬ: 1ಅ:ಕ:ಕ:ಡಿಡಿ ವಿಕಾಸ ಕೋ ಆ ಸೊಸೈಟಿ ವಿನ್ಯಾಸ

9) ರಿಸ ನಂ. 51:ಎ:ಎಲ್‌ಕೆ ಯುನೈಟೆಡ್ ಗೃ.ನಿ.ಸಂಘ ವಸತಿ ವಿನ್ಯಾಸ (ಶಕ್ತಿನಗರ)

10) ರಿಸ ನಂ. 63:ಎ: 63ಬಿ:ಎಸ್‌ಪಿ ರಾಘವೇಂದ್ರ ಗೃ.ನಿ.ಸಂ. ವಸತಿ ವಿನ್ಯಾಸ.

11) ರಿಸ ನಂ. 77:ಬ:ಎಲ್‌ಕೆ ಮಲ್ಲಾರ ಕೋ ಆ ಹೌ.ಸೊಸೈಟಿ ವಸತಿ ವಿನ್ಯಾಸ

12) ರಿಸ ನಂ. 71ಎ:ಎಸ್‌ಪಿ ಶ್ರೀ ಗಿರೆಡ್ಡಿ ವಸತಿ ವಿನ್ಯಾಸ.

13) ಪಾರವಾಡ ಎರಡನೇ ಹಂತ ಹುಬ್ಬಳ್ಳಿ.

14) ಆಕಾಶ ಪಾರ್ಕ್, ಹುಬ್ಬಳ್ಳಿ

15) ಶಿವಗಂಗಾ ಲೇಔಟ್, ಹುಬ್ಬಳ್ಳಿ
16) ಅರಿಹಂತ 2ನೇ ಭಾಗ, ಹುಬ್ಬಳ್ಳಿ
17) ಜಾವೂರ ಲೇಔಟ್, ಹುಬ್ಬಳ್ಳಿ
18) ಶೆಟ್ಟರ್ ಕಾಲನಿ, ಹುಬ್ಬಳ್ಳಿ.
19) ಕೃಷ್ಣಾಪುರ ರಿಸ ನಂ. 74:ಅ:2 (ಚೇತನಕಾಲನಿ) ಹುಬ್ಬಳ್ಳಿ
20) ಅಯೋಧ್ಯಾಗ್ರಾಮ ರಿಸ ನಂ. 162ಕ, ಹುಬ್ಬಳ್ಳಿ
21) ಕೃಷ್ಣಾಪುರ ರಿಸ ನಂ.73:ಎ:ಬಿ:70ಚೈತನ್ಯ ಕಾಲನಿ, ಹುಬ್ಬಳ್ಳಿ.

ಹುಬ್ಬಳ್ಳಿ-ಧಾರವಾಡ ಮಹಾನಗರಕ್ಕೆ ಕುಡಿಯುವ ನೀರಿನ ಸೌಲಭ್ಯ.

1092 (1541)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯು ಹುಬ್ಬಳ್ಳಿ-ಧಾರವಾಡ ಮಹಾನಗರಕ್ಕೆ ಕುಡಿಯುವ ನೀರಿನ ಪೂರೈಕೆ ಸರಿಯಾಗಿ ಮಾಡದೆ ಇರುವುದರಿಂದ ಆಗಾಗ ನೀರಿನ ಹಾಹಾಕಾರ ಆಗಿ ಜನರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?
2. ಹಾಗಿದ್ದಲ್ಲಿ, ಅದನ್ನು ಸರಿಪಡಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ. ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು):

1. ಬಂದಿದೆ.

ಹುಬ್ಬಳ್ಳಿ-ಧಾರವಾಡ ಅವಳಿ ಮಹಾನಗರಕ್ಕೆ ನೀರು ಸರಬರಾಜು ವ್ಯವಸ್ಥೆಯನ್ನು ಸಗಟು ಸರಬರಾಜಿನವರೆಗೆ ಮಂಡಲಿಯು ನಿರ್ವಹಿಸುತ್ತಿದ್ದು, ವಿತರಣಾ ವ್ಯವಸ್ಥೆಯನ್ನು ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ ನಿರ್ವಹಿಸುತ್ತಿದೆ. ಈ ಅವಳಿ ನಗರಗಳಿಗೆ ನೀರಸಾಗರ ಮತ್ತು ಮಲಪ್ರಭಾ ಜಲಾಶಯದ ಮೂಲಗಳಿಂದ ನೀರೊದಗಿಸಲಾಗುತ್ತಿದೆ. ನೀರಸಾಗರದಿಂದ 36.32ಎಂ.ಎಲ್.ಡಿ. ಹಾಗೂ ಮಲಪ್ರಭಮೂಲದಿಂದ 54.48ಎಂ.ಎಲ್.ಡಿ. ಹೀಗೆ ಒಟ್ಟು 90.80ದಶಲಕ್ಷ ಲೀಟರ್ ನೀರನ್ನು ಒದಗಿಸುವ ಸಾಮರ್ಥ್ಯ ಹೊಂದಿದ್ದು, ಬೇಸಿಗೆಯಲ್ಲಿ ಈ ಎರಡು ಮೂಲಗಳಲ್ಲಿ ನೀರಿನ ಪ್ರಮಾಣ ಕಡಿಮೆಯಾಗುತ್ತದೆ. ಈ ದಿನಗಳಲ್ಲಿ ನೀರಸಾಗರದಿಂದ 31.78ದಶಲಕ್ಷ ಲೀಟರ್ ಹಾಗೂ ಮಲಪ್ರಭಾದಿಂದ 45.4ದಶಲಕ್ಷ ಲೀಟರ್ ಹೀಗೆ ಒಟ್ಟು 77.18 ದಶಲಕ್ಷ ಲೀಟರಿನಷ್ಟು ನೀರನ್ನು ಈ ಅವಳಿ ನಗರಗಳಿಗೆ ಒದಗಿಸಲಾಗುತ್ತದೆ. ಅಲ್ಲದೆ, ವಿದ್ಯುತ್ ವ್ಯತ್ಯಯ ಹಾಗೂ ಕೊಳವೆ ಮಾರ್ಗಗಳ ಸೋರುವಿಕೆಯಿಂದ ನೀರು ಸರಬರಾಜು ಪ್ರಮಾಣದಲ್ಲಿ ಸ್ವಲ್ಪ ಕಡಿಮೆಯಾಗಿದೆ. ಆದಾಗ್ಯೂ ನೀರಿನ ಹಾಹಾಕಾರವಾಗುವ ಸಂಭವವಿಲ್ಲ.

2. ಹುಬ್ಬಳ್ಳಿ-ಧಾರವಾಡ ಮಹಾನಗರಕ್ಕೆ ನೀರು ಸರಬರಾಜು ಉತ್ತಮಪಡಿಸುವ ಸಲುವಾಗಿ ಮಲಪ್ರಭಾ ನೀರು ಸರಬರಾಜು ಯೋಜನೆಯ ಮುಖ್ಯ ಕೊಳವೆ ಮಾರ್ಗದಲ್ಲಿಯ ಸೋರುವಿಕೆ ತಡೆಗಟ್ಟಲು ಹಾಗೂ ನೀರಸಾಗರ ನೀರು ಸರಬರಾಜು ಯೋಜನೆಯ ಮುಖ್ಯ ಕೊಳವೆಗಳು